■ ಶಶಿಕುಮಾರ್ ಸಿ.

# ವಾಟ್ಸ್‌ಆ್ಯಪ್ ಸುರಕ್ಷತೆಗೆ 'ಪಾಸ್‌ಕೀ' ಬಲ

ವಾಟ್ಸ್‌ಆ್ಯಪ್, ತನ್ನ ಬಳಕೆದಾರರ ಖಾತೆಯನ್ನು ಇನ್ನಷ್ಟು ಸುರಕ್ಷಿತವಾಗಿರಿಸಲು 'ಪಾಸ್‌ಕೀ' ಎಂಬ ಹೊಸ ಫೀಚರ್ ಪರಿಚಯಿಸಿದೆ. ಇದು ಸುರಕ್ಷತಾ ದೃಷ್ಟಿಯಿಂದ ಅತ್ಯಾಧುನಿಕ ಮಜಲು ಎನಿಸಿದೆ. ಈ ಫೀಚರ್ ಆ್ಯಂಡ್ರಾಯ್ಡ್ ಮತ್ತು ಐಒಎಸ್ ಆಧರಿತ ಸ್ಮಾರ್ಟ್‌ಫೋನ್ ಬಳಕೆದಾರರಿಗೆ ಲಭ್ಯ.

ಆ್ಯಂಡ್ರಾಯ್ಡ್ ಆಧರಿತ ಎಲ್ಲ ಸ್ಮಾರ್ಟ್‌ಫೋನ್ ಬಳಕೆದಾರರಿಗೆ ಹೊಸ ಫೀಚರ್ ಲಭ್ಯವಿದ್ದು, ಐಒಎಸ್ ಆಧರಿತ ಕೆಲ ನಿರ್ದಿಷ್ಟ ಸ್ಮಾರ್ಟ್‌ಫೋನ್‌ಗಳಲ್ಲಿ ಮಾತ್ರ ಇದು ದೊರೆಯಲಿದೆ. ಯಾವ ಐಒಎಸ್ ವರ್ಷನ್‌ನಲ್ಲಿ ಈ ಫೀಚರ್ ಲಭ್ಯ ಎಂಬುದನ್ನು ವಾಟ್ಸ್‌ಆ್ಯಪ್ ಸ್ಪಷ್ಟಪಡಿಸಿಲ್ಲ. ಆದರೆ ಈ ಹಿಂದಿನ ವರದಿಗಳ ಪ್ರಕಾರ, ಐಒಎಸ್ 17 ಮತ್ತು ನಂತರದ ವರ್ಷನ್‌ಗಳಲ್ಲಿ 'ಪಾಸ್‌ಕೀ' ಕೆಲಸ ಮಾಡಲಿದೆ. ಐಫೋನ್ ಎಕ್ಸ್‌ಆರ್ ಮಾಡೆಲ್‌ಗಳು ಅಥವಾ ಹೊಸ ಐಒಎಸ್ ಡಿವೈಸ್‌ಗಳಲ್ಲಿ 'ಪಾಸ್‌ಕೀ' ಸೆಟಪ್ ಮಾಡಿಕೊಳ್ಳಬಹುದು.

ಎಸ್‌ಎಂಎಸ್ ಕೋಡ್‌ಗೆ ಹೋಲಿಸಿದರೆ, 'ಪಾಸ್‌ಕೀ' ಒಂದು ಅತ್ಯುತ್ತಮ ಭದ್ರತಾ ಫೀಚರ್. ಅಥೆಂಟಿಕೇಷನ್ ವಿಧಾನದಿಂದ ಕೂಡಿರುವ ಇದನ್ನು ಫಿಡೊ ಅಲೈಯನ್ಸ್ ವತಿಯಿಂದ ಅಭಿವೃದ್ಧಿಪಡಿಸಲಾಗಿದೆ. ದೈತ್ಯ ಟೆಕ್ ಕಂಪನಿಗಳಾದ ಆ್ಯಪಲ್, ಗೂಗಲ್, ಮೈಕ್ರೊಸಾಫ್ಟ್ ಕಂಪನಿಗಳ ಬೆಂಬಲವನ್ನು ಪಡೆದಿರುವ ಈ ಫೀಚರ್, ಐಒಎಸ್ ಬಳಕೆದಾರರಿಗೆ, ಆ್ಯಪಲ್‌ನ ಕೀಚೇನ್ ಸಿಸ್ಟಮ್‌ನಲ್ಲಿ ಸ್ಟೋರ್ ಆಗಿರಲಿದೆ. ಇದನ್ನು ಫೇಸ್ ಐಡಿ ಅಥವಾ ಟಚ್ ಐಡಿ ಮೂಲಕ ಆ್ಯಕ್ಟಿವೇಟ್ ಮಾಡಬಹುದಾಗಿದೆ.

### ಸೆಟ್ ಮಾಡುವುದು ಹೇಗೆ?

- ಡಿವೈಸ್‌ನಲ್ಲಿ ವಾಟ್ಸ್‌ಆ್ಯಪ್ ಓಪನ್ ಮಾಡಿ.
- ಸೆಟ್ಟಿಂಗ್ ಟ್ಯಾಬ್ ಮೇಲೆ ಕ್ಲಿಕ್ ಮಾಡಿ.
- ಅಕೌಂಟ್ಸ್ ಆಯ್ಕೆ ಮೇಲೆ ಒತ್ತಿ.
- 'ಪಾಸ್‌ಕೀ' ಮೇಲೆ ಕ್ಲಿಕ್ ಮಾಡಿ.
- ಮುಂದಿನ ಸ್ಕ್ರೀನ್‌ನಲ್ಲಿ ಕಾಣುವ 'ಕ್ರಿಯೇಟ್ ಪಾಸ್‌ಕೀ' ಒತ್ತಿ.
- ನಂತರ ನಿಮಗೆ ಫೇಸ್‌ಐಡಿ ಅಥವಾ ಟಚ್ ಐಡಿ ಆಯ್ಕೆಗಳ ಜೊತೆಗೆ ಕಾಣುವ 'ಕಂಟಿನ್ಯೂ' ಆಯ್ಕೆ ಮೇಲೆ ಕ್ಲಿಕ್ಕಿಸಿದರೆ ಸಾಕು. ಪಾಸ್‌ಕೀ ಸೆಟ್ ಮಾಡಿದಂತಾಗುತ್ತದೆ.
- ಫೀಚರ್ ಅಗತ್ಯವಿಲ್ಲದಿದ್ದರೆ ಮೇಲಿನ ಮಾದರಿ ಅನುಸರಿಸಿ 'ರಿವೋಕ್' ಆಯ್ಕೆ ಮೇಲೆ ಕ್ಲಿಕ್ಕಿಸಿದರೆ ಡಿಲೀಟ್ ಆಗಲಿದೆ. ಬೇಕಿದ್ದಲ್ಲಿ ಹೊಸದಾಗಿ ಸೆಟ್ ಮಾಡಿಕೊಳ್ಳಬಹುದು.
- ಐಒಎಸ್ ಆಧರಿತ ಸ್ಮಾರ್ಟ್‌ಫೋನ್‌ನಲ್ಲೂ ಇದೇ ಮಾದರಿ ಅನುಸರಿಸಬಹುದು. ■

# ಯುಪಿಐ ಇಂಟರ್‌ನ್ಯಾಷನಲ್ ಬಳಕೆ ಹೇಗೆ? ಬದಲಾವಣೆ ಏನು?

'ಯೂನಿಫೈಡ್ ಪೇಮೆಂಟ್ಸ್ ಇಂಟರ್ಫೇಸ್' (UPI) ಭಾರತದ ಅತ್ಯಂತ ಜನಪ್ರಿಯ ಡಿಜಿಟಲ್ ಪಾವತಿ ವಿಧಾನ. ಈ ಸೇವೆಯು ಈಗ ವಿದೇಶದಲ್ಲೂ ಲಭ್ಯವಿದೆ. ವಿದೇಶದಲ್ಲಿ ಯುಪಿಐ ಬಳಸಲು ಯುಪಿಐ ಆಧರಿತ ಆ್ಯಪ್‌ಗಳಲ್ಲಿ ಕೆಲವೊಂದು ಬದಲಾವಣೆ ಮಾಡಿಕೊಳ್ಳಬೇಕಿದೆ.

ಈಗಾಗಲೇ ಶ್ರೀಲಂಕಾ, ಮಾರಿಷಸ್, ಭೂತಾನ್, ಓಮನ್, ನೇಪಾಳ, ಫ್ರಾನ್ಸ್ ಮತ್ತು ಯುಎಇಯಲ್ಲಿ ಯುಪಿಐ ಕಾರ್ಯನಿರ್ವಹಿಸುತ್ತಿದೆ. ಈ ಪಟ್ಟಿಗೆ ಇನ್ನೂ 10 ಹೊಸ ದೇಶಗಳು ಸೇರಿಕೊಂಡಿವೆ. ಇವುಗಳಲ್ಲಿ ಮಲೇಷ್ಯಾ, ಸಿಂಗಪುರ, ಫಿಲಿಪ್ಪೀನ್ಸ್, ದಕ್ಷಿಣ ಕೊರಿಯಾದಂತಹ ದೇಶಗಳು ಇವೆ. ಈ ದೇಶಗಳಿಗೆ ಹೆಚ್ಚಿನ ಸಂಖ್ಯೆಯ ಭಾರತೀಯ ಪ್ರವಾಸಿಗರು ಭೇಟಿ ನೀಡುವ ಕಾರಣ ಯುಪಿಐ ಪಾವತಿಯನ್ನು ಈ ದೇಶಗಳಿಗೂ ವಿಸ್ತರಿಸಲಾಗಿದೆ.

ವಿದೇಶದಲ್ಲೂ ಯುಪಿಐ ಕೆಲಸ ಮಾಡುತ್ತಿರುವುದರಿಂದ ನೀವು ಸ್ಥಳೀಯ ಕರೆನ್ಸಿಗೆ ಭಾರತೀಯ ಕರೆನ್ಸಿಯನ್ನು ವಿನಿಮಯ ಮಾಡಿಕೊಳ್ಳುವ ಬಗ್ಗೆ ಹೆಚ್ಚು ಚಿಂತಿಸಬೇಕಾಗಿಲ್ಲ. ನೇರವಾಗಿ ಯುಪಿಐ ಮೂಲಕ ಪಾವತಿ ಮಾಡಲು ಸಾಧ್ಯವಾಗುತ್ತದೆ.

ಯುಪಿಐ ಮೂಲಕ ಪಾವತಿ ಮಾಡಲು, ಯುಪಿಐ ಅಪ್ಲಿಕೇಷನ್‌ಗಳನ್ನು ಬಳಸಬೇಕಾಗುತ್ತದೆ. ಅಂತರರಾಷ್ಟ್ರೀಯ ಪಾವತಿ ಮಾಡುವ ಮೊದಲು ಈ ಕೆಳಗಿನ ಹಂತಗಳನ್ನು ಅನುಸರಿಸಿ.

### ಫೋನ್ ಪೇ

- ಯುಪಿಐ ಅಪ್ಲಿಕೇಷನ್ ತೆರೆದು ಪ್ರೊಫೈಲ್ ಮೇಲೆ ಕ್ಲಿಕ್ ಮಾಡಿ.
- ಪೇಮೆಂಟ್ ಮ್ಯಾನೇಜ್ಮೆಂಟ್ ವಿಭಾಗಕ್ಕೆ ಹೋಗಿ ಅಲ್ಲಿ ಯುಪಿಐ ಇಂಟರ್‌ನ್ಯಾಷನಲ್ ಆಯ್ಕೆಮಾಡಿ.
- ವಿದೇಶಿ ಪಾವತಿಗಾಗಿ ಬಳಸಲು ಬ್ಯಾಂಕ್ ಖಾತೆಯ ಪಕ್ಕದಲ್ಲಿ ಕಾಣುವ ಆ್ಯಕ್ಟಿವ್ ಬಟನ್ ಒತ್ತಿ.
- ಖಚಿತಪಡಿಸಲು ಯುಪಿಐ ಪಿನ್ ನಮೂದಿಸಿ, ಯುಪಿಐ ಅಂತರರಾಷ್ಟ್ರೀಯ ಪಾವತಿ ಸಕ್ರಿಯಗೊಳಿಸಿ.

### ಗೂಗಲ್ ಪೇ

- ಅಪ್ಲಿಕೇಷನ್ ತೆರೆದು ಕ್ಯುಆರ್ ಕೋಡ್ ಟ್ಯಾಪ್ ಮಾಡಿ.
- ಅಂತರರಾಷ್ಟ್ರೀಯ ವ್ಯಾಪಾರಿಯ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ.
- ವಿದೇಶಿ ಕರೆನ್ಸಿಗೆ ತಕ್ಕಂತೆ ಪಾವತಿ ಮೊತ್ತ ನಮೂದಿಸಿ.
- ವಿದೇಶಿ ಪಾವತಿಗಾಗಿ ಬಳಸಲು ಬ್ಯಾಂಕ್ ಖಾತೆಯನ್ನು ಆಯ್ಕೆ ಮಾಡಿ.
- 'ಯುಪಿಐ ಇಂಟರ್‌ನ್ಯಾಷನಲ್' ಸಕ್ರಿಯಗೊಳಿಸಿ.

### ನೆನಪಿನಲ್ಲಿಡಬೇಕಾದ ಅಂಶಗಳು

- ಯುಪಿಐ ಇಂಟರ್‌ನ್ಯಾಷನಲ್ ಅನ್ನು ಬೆಂಬಲಿಸುವ ಬ್ಯಾಂಕ್ ಖಾತೆಗಳಲ್ಲಿ ಮಾತ್ರ ಯುಪಿಐ ಅಂತರರಾಷ್ಟ್ರೀಯ ವಹಿವಾಟುಗಳನ್ನು ಮಾಡಬಹುದು.
- ಯಾವುದೇ ಸ್ಥಳೀಯ ಬ್ಯಾಂಕ್ ಖಾತೆಗಳು ಈ ಸೇವೆಗೆ ಪೂರಕವಾಗಿ ಕಾರ್ಯನಿರ್ವಹಿಸುವುದಿಲ್ಲ.
- ಸ್ಕ್ಯಾನ್ ಮಾಡಿ ಪಾವತಿಸಿದ ಬಳಿಕವೂ ಬ್ಯಾಂಕ್ ಖಾತೆಯಿಂದ ಕಡಿತಗೊಂಡ ಹಣವು ಭಾರತೀಯ ಕರೆನ್ಸಿಯಲ್ಲಿ ಇರುತ್ತದೆ. ವಿದೇಶಿ ಕರೆನ್ಸಿಗೆ ತಕ್ಕಂತೆ ಬ್ಯಾಂಕ್‌ಗಳು ಖಾತೆಯಿಂದ ಕಡಿತಗೊಳಿಸುತ್ತವೆ.
- ಯುಪಿಐ ಪಾವತಿಗಳನ್ನು ಮಾಡಲು ಇಂಟರ್ನೆಟ್ ಅಗತ್ಯ. ವೈಫೈ ಅಥವಾ ಮೊಬೈಲ್ ಡೇಟಾವನ್ನು ಬಳಸಬಹುದು. ■